**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,ಯವರ ನ್ಯಾಯಾಲಯ ಟಿ.ನರಸೀಪುರ**

**ಸಿಸಿ ನಂಃ 684/2023**

**ಸಿಡಬ್ಲ್ಯೂ-2 ಪಿಡಬ್ಲ್ಯೂ-5**

| | | |
|---|---|---|
| ಸಾಕ್ಷಿದಾರರ ಹೆಸರು | : | ಪರಶಿವಮೂರ್ತಿ |
| ತಂದೆಯ ಹೆಸರು | : | ಚೆನ್ನಪ್ಪ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ವಾಹನ ಚಾಲಕ |
| ವಾಸಸ್ಥಳ | : | ಹೊಸ ಮಾಲಂಗಿ ಗ್ರಾಮ |

**ಸಾಕ್ಷಿಗೆ ದಿನಾಂಕಃ 14.08.2026 ರಂದು ಪ್ರಮಾಣ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಮೃತ ಮಹದೇವಮ್ಮರವರು ನನಗೆ ಗೊತ್ತು. ಚಾಸಾ.3 ರವರು ನನಗೆ ಗೊತ್ತು. ಆರೋಪಿಯು ನನಗೆ ಗೊತ್ತು. ದಿನಾಂಕ 13.07.2023 ರಂದು ರಾತ್ರಿ 7.30 ಗಂಟೆ ಸಮಯದಲ್ಲಿ ಅಮ್ಮಾಜಿ ಕಟ್ಟೆಯ ಬಳಿ ಅಪಘಾತವಾಗಿರುತ್ತದೆ. ಚಿಕನ್ ಅಂಗಡಿಯ ಮುಂಭಾಗ ಅಪಘಾತವಾಗಿರುತ್ತದೆ. ಆ ಸಮಯದಲ್ಲಿ ನಾನು ನನ್ನ ಕೆಲಸವನ್ನು ಮುಗಿಸಿ ಚಿಲ್ಲರೆ ಅಂಗಡಿಯ ಬಳಿ ನಿಂತಿದ್ದೆನು. ಮೃತ ಮಹದೇವಮ್ಮ ರವರು ಅಂಗಡಿಯಿಂದ ಸಾಮಾಗ್ರಿಗಳನ್ನು ಖರೀದಿ ಮಾಡಿ ನಡೆದುಕೊಂಡು ಹೋಗುತ್ತಿದ್ದರು. ಆರೋಪಿಯು ತನ್ನ ಬಾಬ್ತು ಕೆ ಎ-55 ಬಿ-6100 ಹೊಂಡಾ ಆಕ್ಟೀವಾ ಸ್ಕೂಟರ್ ನಲ್ಲಿ ಕೊಳ್ಳೇಗಾಲದಿಂದ ಮಾದಾಪುರ ಗ್ರಾಮದ ಕಡೆ ಬಂದಿದ್ದು, ಸದರಿ ವಾಹನದಲ್ಲಿ 3 ಜನ ಕುಳಿತಿದ್ದರು. ಆರೋಪಿಯು ತನ್ನ ವಾಹನವನ್ನು ಅತಿ ವೇಗದಿಂದ ಚಲಾಯಿಸಿಕೊಂಡು ಬಂದು ಮೃತ ಮಹದೇವಮ್ಮ ನವರಿಗೆ ಡಿಕ್ಕಿ ಪಡಿಸಿದ ಪರಿಣಾಮ ಅವರ ತಲೆಯು ತೂತು ಆಗಿ ರಕ್ತ ಬರುತ್ತಿತ್ತು. ನಂತರ ನಾನು ಸರ್ಕಾರಿ ಆಸ್ಪತ್ರೆ ಟಿ.ನರಸೀಪುರಕ್ಕೆ ಕರೆದುಕೊಂಡು ಬಂದು ಸೇರಿಸಿರುತ್ತೇನೆ. ಈ ಸಂಬಂಧ ನಾನು ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿಯ ಅತಿವೇಗ ಮತ್ತು ಅಜಾಗರೂಕತೆಯ ಚಾಲನೆಯಿಂದ ಅಪಘಾತವಾಗಿರುತ್ತದೆ.

ಸಾಕ್ಷಿಯು ನಿ.ಪಿ.3 ರಿಂದ 6 ರ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯು ಗೈರು ಹಾಜರಿದ್ದು, ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು : ಜಿ.ಆರ್.ಎಸ್. ವಕೀಲರಿಂದ :**

ನಾನು ಅಂಗಡಿಯನ್ನು ಹೊಸಮಾಲಂಗಿ ಗ್ರಾಮಕ್ಕೆ ಹೋಗುವ ಎಡಭಾಗದಲ್ಲಿ ಇಟ್ಟಿರುತ್ತೇನೆ. ಅಪಘಾತ ಆದ ಸ್ಥಳದಲ್ಲಿ ವಿದ್ಯುತ್ ಕಂಬಗಳು ಇರುತ್ತದೆ. ನಿ.ಪಿ.4 ರ ಫೋಟೋದಲ್ಲಿ ವಿದ್ಯುತ್ ಕಂಬ ಇರುವುದು ಕಂಡುಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.11 ರ ಫೋಟೋಗಳಲ್ಲಿ ಬಲಭಾಗದಲ್ಲಿ ವಿದ್ಯುತ್ ಕಂಬ ಇರುವುದಿಲ್ಲ ಎಂದರೆ ಸರಿ. ಸದರಿ ಫೋಟೋದಲ್ಲಿ ಕಾಣುವ ನೀಲಿ ಬಣ್ಣದ ಶೀಟಿನ ಅಂಗಡಿ ನನಗೆ ಸೇರಿರುತ್ತದೆ. ಅಪಘಾತ ಆದ ಶಬ್ಧವನ್ನು ಕೇಳಿದ ಮೇಲೆ ನಾನು ಹೊರಗೆ ಬಂದು ನೋಡಿರುತ್ತೇನೆ. ಅಪಘಾತವನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ಆದ ಸ್ಥಳವು ನನ್ನ ಅಂಗಡಿಯಿಂದ ಸಾಕಷ್ಟು ದೂರದಲ್ಲಿ ಇದ್ದುದ್ದರಿಂದ ಅಪಘಾತವನ್ನು ನೋಡದೆ ಇದ್ದರೂ, ಚಾಸಾ.1 ರವರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿ.ಪಿ.3 ಮತ್ತು 4 ರ ಫೋಟೋದಲ್ಲಿ ಚಾಸಾ.3 ರವರ ಅಂಗಡಿ ಕಾಣಿಸುವುದಿಲ್ಲ. ಮೃತ ಮಹದೇವಮ್ಮ ನವರ ಜೊತೆ 3 ಜನ ಇದ್ದರು. ಮೃತ ಮಹದೇವಮ್ಮ ನವರು ಒಬ್ಬರೇ ನಡೆದುಕೊಂಡು ಹೋಗುತ್ತಿದ್ದರು.

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಷ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿರುತ್ತೇನೆ.)

**ಓ.ಹೇ.ಕೇ.ಸ. ಇದೆ.,**

**1 ನೇ ಹೆಚ್ಚುವರಿ ಸಿ.ಜೆ ಮತ್ತು ಜೆ.ಎಮ್.ಎಫ್.ಸಿ**
**ನ್ಯಾಯಾಲಯ, ತಿ. ನರಸಿಪುರ**